


International Journal of Kannada Research
www.kannadajournal.com

**ISSN: 2454–5813**
IJKR 2020; 6(3): 165-169
© 2020 IJKR
www.kannadajournal.com
Received: 25-05-2020
Accepted: 27-06-2020

**ಶ್ವೇತ.ಜ**
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಬೆಂಗಳೂರು

**Corresponding Author:**
**ಶ್ವೇತ.ಜ**
ಸಂಶೋಧನಾ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಬೆಂಗಳೂರು

# ಕನ್ನಡ ಹಾಗೂ ರಷಿಯನ್ ಸಾಹಿತ್ಯದಲ್ಲಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳ ಸ್ವರೂಪ

**ಶ್ವೇತ.ಜ**

ಭಾಷೆಯ ಅಭಿವ್ಯಕ್ತಿಯಾಗಿ ಸಾಹಿತ್ಯವು ರೂಪಗೊಳ್ಳುತ್ತದೆ. ಇಂತಹ ಸಾಹಿತ್ಯಕ್ಕೆ ಕೇಂದ್ರ ಬಿಂದು ಸಮಾಜ. ಆದುದರಿಂದ ಭಾಷೆಯ ಮೂಲಕ ಆಯಾ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ವಿಚಾರಗಳನ್ನು ಕನ್ನಡ ಹಾಗೂ ರಷ್ಯನ್ ಬರಹಗಾರರು ತಮ್ಮ ಸೃಜನಶೀಲ ಕೃತಿಗಳಲ್ಲಿ ವ್ಯಕ್ತಪಡಿಸಿದ್ದಾರೆ. 'ಸಾಹಿತ್ಯವು ಸಮಾಜದ ಪ್ರತಿಬಿಂಬ'ವಾಗಿರುವುದರಿಂದ ಪ್ರಾದೇಶಿಕ ವಲಯಗಳಲ್ಲಿ ಬದಲಾವಣೆಗೊಳ್ಳುವ ಎಲ್ಲಾ ವಿದ್ಯಾಮಾನಗಳನ್ನು ಅರಿಯಲು ಸಾಹಿತ್ಯದ ಮೂಲಕ ತಿಳಿಯಲು ಸಹಕಾರಿಯಾಗುತ್ತದೆ. ಆದುದರಿಂದ ಕನ್ನಡದ ಸಂದರ್ಭದಲ್ಲಿ ವಸಾಹತುಶಾಹಿಯಿಂದ ಆಗಮನವಾದ ಇಂಗ್ಲಿಷ್ ಶಿಕ್ಷಣವು ವ್ಯಕ್ತಿಯನ್ನು ಮೌಢ್ಯತೆಯಿಂದ ವೈಚಾರಿಕತೆಯ ಕಡೆಗೆ ಸಾಗುವುದರ ಜೊತೆಗೆ ನಿಸರ್ಗದಿಂದ ನಗರಕ್ಕೆ ಆಕರ್ಷಣೆಗೆ ಒಳಗು ಮಾಡಿದಂತಹ ಬಗೆಯು ಕಂಡುಬರುತ್ತದೆ. ಹಾಗೂ ರಷ್ಯನ್ ಸಂದರ್ಭದಲ್ಲಿ ಆಧುನಿಕತೆಯು ಆಗಮನವಾಗಿದ್ದು ಯೂರೋಪಿನ ಕೈಗಾರೀಕರಣದ ಪ್ರಭಾವದಿಂದ. ಇಲ್ಲಿ ನಿರಂಕುಶ ಪ್ರಭುತ್ವ, ವರ್ಗಸಂಘರ್ಷ, ಜಮೀನ್ದಾರಿ ಪದ್ಧತಿಯಿಂದ ಬಿಡುಗಡೆಗೊಳ್ಳುವ ನಿಟ್ಟಿನಲ್ಲಿ ಕ್ರಾಂತಿಯು ಜರುಗಿತು. ಭಾಷೆ, ಸಂಸ್ಕೃತಿ, ಪ್ರಾದೇಶಿಕತೆಯ ಭಿನ್ನತೆಯಿದ್ದರೂ ನವೋದಯ ಸಂದರ್ಭದಲ್ಲಿ ಆಧುನಿಕತೆಯು ಕನ್ನಡ ಹಾಗೂ ರಷ್ಯನ್ ಸಾಹಿತ್ಯದಲ್ಲಿ ಹೇಗೆ ನಿಸರ್ಗ ಮತ್ತು ಮನುಷ್ಯ ಸಂಬಂಧಗಳಲ್ಲಿ ಪರಿಣಾಮವನ್ನು ಬೀರಿವೆ ಎಂದು ಕುವೆಂಪು, ಶಿವರಾಮ ಕಾರಂತ ಹಾಗೂ ಟಾಲ್‌ಸ್ಟಾಯ್, ನಿಕೊಲಾಯ್ ಗೊಗೊಲ್‌ರವರ ಕಾದಂಬರಿಗಳ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ.

ಕನ್ನಡದ ಸಂದರ್ಭದಲ್ಲಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳನ್ನು ನವೋದಯ ಕಾದಂಬರಿಗಳ ಪಾತ್ರ, ರಚನೆ, ಘಟನೆಗಳ ಹಿನ್ನೆಲೆಯಲ್ಲಿ ಗುರುತಿಸುವಾಗ ಮೊದಲನೆಯದಾಗಿ ಕುವೆಂಪು ಅವರ ಕಾದಂಬರಿಗಳಲ್ಲಿ ಮಲೆನಾಡಿನ ಜೀವನಾನುಭವದ ಸ್ವರೂಪ ಮತ್ತು ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕರಾವಳಿ ಪ್ರಾಂತ್ಯದ ವರ್ಣನೆಯನ್ನು ಕಾಣಬಹುದು. ಇವರ ಕೃತಿಗಳಲ್ಲಿ ಜೀವನ ಮೌಲ್ಯ ಮತ್ತು ಮನುಷ್ಯ ಸಂಬಂಧಗಳ ಶೋಧನೆಯನ್ನು ಗುರುತಿಸಲಾಗುತ್ತದೆ. ಕಾರಣ ಮನುಷ್ಯನು ನಿಸರ್ಗದೊಂದಿಗೆ ಜೀವಿಸುತ್ತಲೇ ಆಧುನಿಕತೆಯ ಜಗತ್ತಿನ ಮೋಹಕ್ಕೆ ಒಳಗಾಗಿ ಬದುಕನ್ನು ದುರಂತಕ್ಕೆ ಒಳಪಡಿಸಿಕೊಳ್ಳುವುದನ್ನು ತಿಳಿಯಲಾಗುತ್ತದೆ. ಮನುಷ್ಯನ ಹುಟ್ಟು ಮತ್ತು ಸಾವು ನಿಸರ್ಗದೊಂದಿಗೆ ಸಾಗುವ ಪ್ರಕ್ರಿಯೆಯಾಗಿದೆ. ಆಧುನಿಕತೆಗೆ ಒಳಗಾಗಿ ಇಂಗ್ಲಿಷ್ ಶಿಕ್ಷಣ ಪಡೆದ ವ್ಯಕ್ತಿಯು ಹೇಗೆ ನಿಸರ್ಗದಿಂದ ದೂರವಾಗಿ ಕೊನಗೆ ತನ್ನ ಬದುಕನ್ನು ನಿಸರ್ಗದೊಂದಿಗೆ ಕಟ್ಟಿಕೊಳ್ಳುವನು ಎಂಬುದನ್ನು ಗುರುತಿಸಲಾಗುತ್ತದೆ. ಹೂವಯ್ಯನು ಬೇಸಿಗೆ ರಜೆಗೆಂದು ಮೈಸೂರಿನಿಂದ ಕಾನೂರಿಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ನಿಸರ್ಗವನ್ನು ನೋಡುತ್ತಾ ಭಾವಾವೇಶಕ್ಕೆ ಒಳಗಾಗುವನು. "ತಾನು ಕೆಲವು ವರ್ಷಗಳ ಹಿಂದೆ ತೀರ್ಥಹಳ್ಳಿಯಲ್ಲಿ ಓದುತ್ತಿದ್ದಾಗ ಆ ತುಂಗಾ ನದಿಯೂ ಆ ರಾಮತೀರ್ಥವೂ ನಿತ್ಯಯಾತ್ರಾಸ್ನಾನಗಳಾಗಿದ್ದುದು ಆತನ ನೆನಪಿಗೆ ಬಂದಿತು. ಕೆಲವು ಹುಡುಗರು ಅಲ್ಲಿ ಈಜುತ್ತಿದ್ದುದನ್ನು ನೋಡಿ ತಾನೂ ಹಾಗೆಯೇ ಈಜಾಡಿದ್ದುದನ್ನು ನೆನೆದನು. ಸನ್ನಿವೇಶವೇನೂ ಹಿಂದೆ ಇದ್ದಂತೆಯೇ ಕಂಡಿತು. ಆದರೆ ತಾನು ಮಾತ್ರ ಹಿಂದೆ ಇದ್ದಂತಿರಲಿಲ್ಲ".[1]ಹೂವಯ್ಯನ ಮನಸ್ಸಿನಲ್ಲಿ ಅನೇಕ ಆಲೋಚನೆಗಳೂ ಚಿತ್ರಗಳೂ ಸತತವಾಗಿ ಮಿಂಚುತ್ತಿದ್ದವು. ಈತನಿಗೆ ಕಾನೂರಿನ ಪರಿಸರವು ಭಾವೋವೇಶಕ್ಕೆ ಒಳಗು ಮಾಡಿತ್ತು. ಆದುದರಿಂದಲೇ ತಾನು ತನ್ನ ಊರಿಗೆ ಬರುವ ಸಂದರ್ಭದಲ್ಲಿ

[1] ಕಾನೂರು ಹೆಗ್ಗಡತಿ: ಕುವೆಂಪು, ೧೩ನೇ ಮುದ್ರಣ, ಉದಯರವಿ ಪ್ರಕಾಶನ ಮೈಸೂರು, ಪುಟ ಸಂಖ್ಯೆ ೦೩.

ತನ್ಮಯತೆಗೊಳ್ಳುವುದು. ಇಷ್ಟೇ ಅಲ್ಲದೇ "ತನ್ನ ವಿದ್ಯೆ, ತನ್ನ ಧ್ಯೇಯ, ತನಗೆ ಬರಲಿರುವ ಅಡಚಣೆಗಳು, ವಿಧವೆಯಾಗಿದ್ದ ತನ್ನ ತಾಯಿ, ತನ್ನ ಮತ್ತು ತನ್ನ ತಾಯಿಯ ಮೇಲೆ, ತನ್ನ ಚಿಕ್ಕಪ್ಪನಿಗಿರುವ ಒಂದು ವಿಧವಾದ ಹೊಟ್ಟೆಕಿಚ್ಚು ಇತ್ಯಾದಿ ವಿಷಯಗಳು ಮನೋರಾಜ್ಯದಲ್ಲಿ ಪ್ರವಹಿಸುತ್ತಿರಲು ಮರದ ಮೇಲೆ ಕೋಗಿಲೆಯೊಂದು 'ಕುಹೂ ಕುಹೂ' ಎಂದು ಕೂಗಿತು. ಹೂವಯ್ಯ ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ಬಿದ್ದವನಂತೆ ಎಚ್ಚತ್ತು ನೋಡಿದನು".[2]ಹೂವಯ್ಯನ ಮನಸ್ಸು ನಿಸರ್ಗಕ್ಕೆ ಎಷ್ಟು ಸ್ಪಂದಿಸುತ್ತಿತ್ತು ಎಂದು ತಿಳಿಯಲಾಗುತ್ತದೆ. ಈತನ ಪ್ರಭಾವ ಇತರರ ಮೇಲೆ ಪರಿಣಾಮಬೀರಿದ ರೀತಿಯನ್ನು ಗಮನಿಸಿದಾಗ "ಉಳುವುದು ಬಿತ್ತುವುದು ಇಂತಹ ಪ್ರಯೋಜನದ ಕಾರ್ಯಗಳಲ್ಲಿ ಬಹು ಸೋಮಾರಿಯೆಂದು ಹೆಸರುಗೊಂಡಿದ್ದ ಪುಟ್ಟಣ್ಣನಂತೂ ಕಂಡವರೆಲ್ಲ ಬೆರಗಾಗುವಂತೆ ಹೂವಯ್ಯನೊಡನೆ ಕೆಲಸ ಮಾಡುತ್ತಿದ್ದನು. ಹೂವಯ್ಯ ಕಥೆ ಹೇಳುವುದು, ಪದ್ಯ ಹಾಡುವುದು, ವಿನೋದವಾಡುವುದು ಮೊದಲಾದವುಗಳಿಂದ ತನ್ನೊಡನೆ ಕೆಲಸ ಮಾಡುವವರೆಲ್ಲರನ್ನೂ ಉತ್ಸಾಹಗೊಳಿಸುತ್ತಿದ್ದನು".[3] ಶಿಕ್ಷಿತನಾದ ಹೂವಯ್ಯ ವೈಚಾರಿಕ ನಿಲುವುಗಳು ಆದರ್ಶದ ಮಾದರಿಗಾಗಿ ಬದುಕನ್ನು ಕಟ್ಟಿಕೊಳ್ಳಲು ಇತರರಿಗೆ ಸಹಾಯಕವಾಗಿತ್ತು. ತನ್ನ ಪರಿಸರದಲ್ಲಿ ದೇವರ ಹೆಸರಿನಲ್ಲಿ ನಡೆಯುವ ಮೌಢ್ಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಈತನ ಮನಸ್ಥಿತಿ ಕೂಡಿತ್ತು. "ಕಾನೂರಿನಲ್ಲಿ ನಡೆಯುತ್ತಿದ್ದ ಕಷ್ಟ, ಸಂಕಟಗಳಿಗೂ ಅನಾಹುತಗಳಿಗೂ, ಜಗಳಗಳಿಗೂ, ರೋಗರುಜಿನಗಳಿಗೂ ಎಲ್ಲಕ್ಕೂ ಆ ಹೋತವೇ ಮುಖ್ಯಕಾರಣವೆಂಬ ಭಾವವೂ ಸಾಮಾನ್ಯವಾಯಿತು. ಮನೆ ಪಾಲಾದುದು, ವಾಸು ಮೂರ್ಛೆಹೋದುದು, ಚಂದ್ರಯ್ಯಗೌಡರಿಗೆ ಧಾತು ಹಾರಿದುದು, ಅವರು ಸುಬ್ಬಮ್ಮಗೆ ಹೊಡೆಯುತ್ತಿದ್ದುದು, ಬಯ್ಯುತ್ತಿದ್ದುದು – ಎಲ್ಲಕ್ಕೂ 'ಅನಿಷ್ಟಕ್ಕೆ ಶನಿ ಗುರಿ' ಎಂಬಂತೆ, ಹೋತವೆ ಗುರಿಯಾಯಿತು'.[4] ಊರಿನಲ್ಲಿ ಯಾವ ಘಟನೆಯು ಸಂಭವಿಸಿದರೂ ಅದಕ್ಕೆಲ್ಲ ಹೂವಯ್ಯನ ನಡಾವಳಿಕೆಯೇ ಕಾರಣ ಎಂಬ ರೀತಿಯಲ್ಲಿ ದೂಷಿಸುತ್ತಿದ್ದರು. ನಿಸರ್ಗ ಮತ್ತು ಮನುಷ್ಯನ ಸಂಬಂಧವು ಆಧುನಿಕತೆಗೆ ಒಳಗಾಗಿ ತಲ್ಲಣವನ್ನು ಅನುಭವಿಸಿದರೂ ಕೊನೆಗೆ ನಿಸರ್ಗದತ್ತ ಮರುಳುವ ಪ್ರಯತ್ನಗಳು ಕಂಡುಬರುತ್ತದೆ.

ಶಿವರಾಮ ಕಾರಂತರ ಸೃಜನಶೀಲ ಕೃತಿಗಳಲ್ಲಿ ಕೇಂದ್ರಬಿಂದು ಮನುಷ್ಯ. ಆದುದರಿಂದ ಮನುಷ್ಯನ ಪರಿಕಲ್ಪನೆ, ಸಾಮಾಜಿಕ ಸಂಬಂಧದ ನಿಲುವುಗಳು, ಗಂಡು ಹೆಣ್ಣಿನ ಸಂಬಂಧ ಹೀಗೆ ಭಿನ್ನ ಸ್ವರೂಪದ ಆಯಾಮಗಳನ್ನು ಒಳಗೊಂಡಿದೆ. ಅಲ್ಲದೇ ಸಂಪ್ರದಾಯ, ಪ್ರಾದೇಶಿಕತೆ, ಆಧುನಿಕತೆಯ ಸಂಘರ್ಷದ ಬಗೆಯು ಕಂಡುಬರುತ್ತದೆ. ಮನುಷ್ಯನು ನಿಸರ್ಗದ ಒಂದು ಭಾಗವಾಗಿದ್ದು, ಬೆಟ್ಟ ಗುಡ್ಡ, ಕಾಡು, ಗಾಳಿ, ಮಳೆ ಹೀಗೆ ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ದಾಟಿ ಸಾಗುವ ಆತ್ಮಸ್ಥೈರ್ಯವನ್ನು ನಿಸರ್ಗವು ಮನುಷ್ಯನಲ್ಲಿ ಬೆಳೆಸುತ್ತದೆ. ಕೃಷಿಪ್ರಧಾನವಾದ ಸಮಾಜವು ಆಧುನಿಕತೆಗೆ ಒಳಗಾಗಿ ವಿಜ್ಞಾನ, ತಂತ್ರಜ್ಞಾನ ಸಾಧನಗಳ ಬಳಕೆಯಲ್ಲಿ ಪರಿವರ್ತನೆಗೆ ಒಳಗಾದರೂ ಮನುಷ್ಯ ನಿಸರ್ಗದ ನಡುವೆ ಹೊಂದಿರುವ ಸಂಬಂಧ ನಿರಂತರವಾದುದು. ಉದಾಹರಣೆಗೆ ಮರಳಿ ಮಣ್ಣಿಗೆ ಕಾದಂಬರಿಯ ರಾಮ ಐತಾಳರು ಮತ್ತು ಬೆಟ್ಟದ ಜೀವದ ಕಾದಂಬರಿಯ ಗೋಪಾಲಯ್ಯನವರನ್ನು ಗುರುತಿಸಲಾಗುತ್ತದೆ. ನಿಸರ್ಗದ ನಡುವೆ ಬದುಕನ್ನು ರೂಪಿಸಿಕೊಂಡ ರೀತಿಯು ತಿಳಿಯುತ್ತದೆ. 'ಬಾಳು ನನಗೆ ಮುಖ್ಯ, ಬಾಳನ್ನು ತಿಳಿಯಬೇಕಾದ ಸಾಧನಗಳೂ ನನಗೆ ಮುಖ್ಯ' ಎಂದು ಹೇಳುವ ಕಾರಂತರು ತಮ್ಮ ಸೃಜನಶೀಲ ಕೃತಿಯಲ್ಲಿ ಬದುಕಿನ ಅನ್ವೇಷಣೆ ಮೂಲಕ ಪಡೆದ ಜೀವಾನುಭವಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸಿದ್ದಾರೆ. 'ಬೆಟ್ಟದ ಜೀವ' ಕಾದಂಬರಿಯಲ್ಲಿ ನಿರೂಪಕರಾದ ಶಿವರಾಮ ದಾರಿ ತಪ್ಪಿ ಸುಬ್ರಹ್ಮಣ್ಯ–ಗುತ್ತಗಾರು ಸುಳ್ಯ ಮಾರ್ಗದ ಪಕ್ಕದಲ್ಲಿ ಕಾಡಿನ ಮಧ್ಯೆ ಇರುವ ಕೆಳಬೈಲು ಗೋಪಾಲಯ್ಯನ ಮನೆ ಸೇರುತ್ತಾರೆ. ಅಲ್ಲಿ ಕಳೆದ ನಾಲ್ಕಾರು ದಿನಗಳಲ್ಲಿ ಗೋಪಾಲಯ್ಯನ ಬದುಕು, ಅವರ ಹಿರಿಮೆ, ಕಾಣೆಯಾದ ಅವರ ಮಗನ ಬಗ್ಗೆ ದಂಪತಿಗಳಿಗಿರುವ ನೋವು ಮೊದಲಾದವುಗಳ ಪರಿಚಯವನ್ನು ಹೊಂದುತ್ತಾರೆ. ಕಾರಂತರು ಈ ಕಾದಂಬರಿಯಲ್ಲಿ ಪ್ರಾದೇಶಿಕತೆಯನ್ನು ಚಿತ್ರಿಸಿದ್ದಾರೆ. ನಿಸರ್ಗ ಮತ್ತು ಮನುಷ್ಯನ ಸಂಬಂಧವೆಂಬುದು 'ಮನುಷ್ಯ ಜೀವನವನ್ನು ರೂಪಿಸಲು ವಾಸ್ತವವಾದೀ ಬರಹಗಾರರ ಒಂದು ರೀತಿಯಾಗಿದ್ದು, ಇದರಿಂದಾಗಿ ಪರಿಸರವನ್ನು ಸುಲಭವಾಗಿ ಸೃಷ್ಟಿಸುವ ಅವಕಾಶ ಅವರಿಗಿರುತ್ತದೆ. ಇಲ್ಲಿ ಪ್ರಕೃತಿಯೂ, ಇತರ ಮಾನವ ಪಾತ್ರಗಳಷ್ಟೇ ಮಹತ್ವದ ಸ್ಥಾನವನ್ನು ಪಡೆದಿರುತ್ತದೆ. ಪ್ರಕೃತಿಯು ಇಲ್ಲಿ ಬಾಹ್ಯ ಪ್ರಕೃತಿಯೂ ಆಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಪ್ರಾದೇಶಿಕತೆಯು ಬರಿಯ ಪರಿಸರ ನಿರ್ಮಾಣಕ್ಕಾಗಿ, ಮನುಷ್ಯನ ಅಂತರಂಗದ ಗೂಢಗಳನ್ನು ಸಂಕೇತಿಸುವುದಕ್ಕಾಗಿ ಇರುವುದೆಂದು ತಿಳಿದುಕೊಂಡಾಗ ಕಾದಂಬರಿಯ ಒಳನೋಟದ ಅರಿವಾಗುತ್ತದೆ[5] ಗೋಪಾಲಯ್ಯನ ಪಾತ್ರವು ನಿಸರ್ಗದ ಮಧ್ಯೆ ಬದುಕನ್ನು ಸಾಗಿಸುತ್ತಾ ನೆಮ್ಮದಿಯ ಜೀವನದ ಮಾಗುವಿಕೆಯ ಚಿತ್ರಣವಾಗಿದೆ. ಈ ಹಿನ್ನೆಲೆಯಲ್ಲಿ 'ಬೆಟ್ಟದ ಜೀವ' ಕಾದಂಬರಿಯಲ್ಲಿ ಕಂಡುಬರುವ ನಿಸರ್ಗ ಮತ್ತು ಮನುಷ್ಯನ ಸಂಬಂಧವು ಹೇಗೆ ಕಂಡುಬಂದಿದೆ ಎಂದು ಗುರುತಿಸಲಾಗುತ್ತದೆ. ನಿರೂಪಕರ ಪ್ರಯಾಣದ ಮೂಲಕ ಸಾಗುವ ಕಾದಂಬರಿಯು ಪ್ರಾರಂಭವಾಗುತ್ತದೆ. ಈ ಕಾದಂಬರಿಯಲ್ಲಿ ಪ್ರಾದೇಶಿಕತೆಯ ಅಂಶಗಳು ಒಳಗೊಂಡಿದೆ. ಇಬ್ಬರು ವೃದ್ಧ ವ್ಯಕ್ತಿಗಳಾದ ಗೋಪಾಲಯ್ಯ ಮತ್ತು ಶಂಕರಿ ದಂಪತಿಗಳು ತಮ್ಮ ಆಯಸ್ಸಿನ ಪೂರಾ ಬೆಟ್ಟ ಗುಡ್ಡ, ಅತಿಥಿಗಳ ಸತ್ಕಾರ, ಗ್ರಾಮೀಣ ನೆಮ್ಮದಿಯ ಬದುಕಿನ ಜೀವನ ಸಾಗಿಸುವರು. ಮಗ ಶಂಭೂವಿನ ಅಗಲಿಕೆಯಿಂದ ಪರಿತಪಿಸುವ ಬಗೆಯನ್ನು ತಿಳಿಯಲಾಗುತ್ತದೆ. ಒಮ್ಮೆ ನಿರೂಪಕರ ಬಳಿ ತಮ್ಮ ಮನದ ಅಳಲನ್ನು ಹೇಳುವಾಗ ಹೀಗೆ ತಮ್ಮ ಹೆಂಡತಿಗೆ ಹೇಳುವರು "ಶಂಕರಿ, ನಿನಗೆ ವರ್ಷವಾದದ್ದು ಮಣ್ಣಿಗೆ. ಅವನು ಬರುವ ಮಗನಾದರೆ ಎಂದೋ ಬರುತ್ತಿದ್ದ. ನಮ್ಮ ಇಷ್ಟೆಲ್ಲ ಪ್ರಯತ್ನ ವ್ಯರ್ಥವಾಗುತ್ತಿತ್ತೆ? ನಮ್ಮ 'ಲಕ್ಷ್ಮಿ' ದನಕ್ಕೇನಾಯಿತು ನೆನ್ನೆ? ಅದನ್ನು ಹುಲಿ ಹಿಡಿದಂತೆ, ಅವನನ್ನೂ ಯಾವುದೋ ಹೆಣ್ಣು ಹುಲಿ ಹಿಡಿದಿರಬೇಕು"[6] ಎಂದು ಗೋಪಾಲಯ್ಯ ಹೇಳುವರು. ಶಿಕ್ಷಣ ಕಲಿತ ಯುವಕರು ನಗರದ ಜೀವನಕ್ಕೆ ಆಕರ್ಷಣೆಗೆ ಒಳಗಾಗಿ ತಮ್ಮ ಪರಿಸರ, ತಂದೆ ತಾಯಿಯ ಮರೆಯುವಿಕೆಯು ಗೋಪಾಲಯ್ಯನವರ ಮಾತಿನಲ್ಲಿ ತಿಳಿಯುತ್ತದೆ. ಮಗ ಕೆಳಬೈಲು ಶಂಭು ಭಟ್ಟನ ಆಗಮನದ ನಿರೀಕ್ಷೆಯಲ್ಲಿ ಗೋಪಾಲಯ್ಯ ಮತ್ತು ಶಂಕರಿ ದಂಪತಿಗಳು ತಮ್ಮ ಜೀವನವನ್ನು ನಿಸರ್ಗದ ಮಧ್ಯೆ

[2] ಕಾನೂರು ಹೆಗ್ಗಡತಿ: ಕುವೆಂಪು, ೧೩ನೇ ಮುದ್ರಣ, ಉದಯರವಿ ಪ್ರಕಾಶನ ಮೈಸೂರು, ಪುಟ ಸಂಖ್ಯೆ ೦೫.

[3] ಕಾನೂರು ಹೆಗ್ಗಡತಿ: ಕುವೆಂಪು, ೧೩ನೇ ಮುದ್ರಣ, ಉದಯರವಿ ಪ್ರಕಾಶನ ಮೈಸೂರು, ಪುಟ ಸಂಖ್ಯೆ ೩೩೪.

[4] ಕಾನೂರು ಹೆಗ್ಗಡತಿ: ಕುವೆಂಪು, ೧೩ನೇ ಮುದ್ರಣ, ಉದಯರವಿ ಪ್ರಕಾಶನ ಮೈಸೂರು, ಪುಟ ಸಂಖ್ಯೆ ೩೭೪.

[5] ಕಾರಂತ ಕೃತಿ ಕಡಲು: ಸಂ:ಜಿ.ಎಸ್.ಭಟ್ಟ, ೧ನೇ ಮುದ್ರಣ ೨೦೧೮, ತನು ಮನು ಪ್ರಕಾಶನ ಮೈಸೂರು, ಪುಟ ಸಂಖ್ಯೆ ೧೦೬

[6] ಬೆಟ್ಟದ ಜೀವ: ಡಾ.ಕೆ.ಶಿವರಾಮ ಕಾರಂತ, ಮರು ಮುದ್ರಣ ೨೦೧೦, ಸಪ್ನ ಬುಕ್ ಹೌಸ್ ಬೆಂಗಳೂರು, ಪುಟ ಸಂಖ್ಯೆ ೦೯.

ಸಾಗಿಸುವ ರೀತಿಯನ್ನು ಕಾಣುತ್ತೇವೆ. ನಗರಗಳು ಮನುಷ್ಯನನ್ನು ನಿಸರ್ಗದಿಂದ ಬೇರ್ಪಡಿಸುವ ಜೊತೆಗೆ ಬಾಂಧವ್ಯದಲ್ಲೂ ಬಿರುಕುಗಳನ್ನು ಉಂಟುಮಾಡುತ್ತಿದೆ. ಗೋಪಾಲಯ್ಯನ ಮಡದಿ ಶಂಕರಿ ಮಗನ ಬಗೆಗೆ ವಿಚಾರ ಬಂದಾಗ ಹೀಗೆ ಹೇಳುವರು "ಏನು, ಅವನಿಗೆ ಓದು ಬರಹ ಅತಿಯಾಗಿ ಹೀಗೆಲ್ಲ ಆದೆನೋ ಅಥವಾ ಅದು ಸಹವಾಸ ದೋಷವೋ? ಅಂತು, ಇವರು ಈ ಮೂಲೆಯಲ್ಲಿ ಮನುಷ್ಯರಿಲ್ಲದ ಸಂದಿನಲ್ಲಿದ್ದು ಕೊಂಡು, ಅವನದೇ ತಪಸ್ಸಿನಲ್ಲಿ ದಿನ ಬೆಳಗು ಮಾಡುತ್ತಿದ್ದರೆ, ಅವನಿಗೆ ಯಾಕೋ ಈ ಊರೇ ಹಿಡಿಸಲಿಲ್ಲ. ಪೇಟೆಯ ರುಚಿ ಹಿಡಿದವರಿಗೆ ಹಾಗೆಯೇ"[7] ಎಂದು ಹೇಳುವರು. ಒಟ್ಟಿನಲ್ಲಿ ಶಿವರಾಮಕಾರಂತರ ಸೃಜನಶೀಲ ಕೃತಿಗಳಲ್ಲಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳ ಸ್ವರೂಪವನ್ನು ಹೀಗೆ ಗುರುತಿಸಲಾಗುತ್ತದೆ.

ರಷ್ಯನ್ ಸಂದರ್ಭದಲ್ಲಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳ ಸ್ವರೂಪವನ್ನು ಗುರುತಿಸುವಾಗ ರಷ್ಯನ್ ಸಮಾಜವು ಕೃಷಿ ಪ್ರಧಾನವಾಗಿದ್ದು ಜಮೀನ್ದಾರರಿಂದ ರೈತರು ಅನುಭವಿಸಿದ ಶೋಷಣೆಯ ಮುಂದುವರೆದ ಹಾಗೆ 19ನೇ ಶತಮಾನದಲ್ಲಿ ರಷ್ಯನ್ ಸಮಾಜದಲ್ಲಿ ಉಂಟಾದ ಯೂರೋಪಿನ ಆಧುನಿಕತೆಯ ಪ್ರಭಾವವು ಮನುಷ್ಯರ ಬದುಕಿನಲ್ಲಿ ಉಂಟು ಮಾಡಿದ ಸಂಘರ್ಷದ ಆಯಾಮಗಳನ್ನು ಗುರುತಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ರಷ್ಯನ್ ಸಮಾಜದಲ್ಲಿ ಆಧುನಿಕತೆಯ ಸ್ವರೂಪವು ಉಂಟಾಗಲು ಕಾರಣ ಕಾರ್ಮಿಕರ ಕ್ರಾಂತಿ. ಅಂದರೆ ಶೋಷಣೆಗೆ ಒಳಪಟ್ಟಾಗ ಅದರಿಂದ ಬಿಡುಗಡೆಯೊಂದಲು ಮಾಡುವ ಹೋರಾಟವಾಗಿ ಕಂಡುಬರುತ್ತದೆ. ಇಂತಹ ಯೂರೋಪಿನ ಕೈಗಾರೀಕರಣದ ಕ್ರಾಂತಿಯು ಮೊದಲು ಆರಂಭವಾದುದು ಇಂಗ್ಲೇಡಿನಲ್ಲಿ. ಅನಂತರ ಯೂರೋಪ್ ದೇಶಗಳಿಗೆ ಹರಡಿತು. ಅನಂತರ ರಷ್ಯನ್ ಸಮಾಜದ ಮೇಲೆ ಯೂರೋಪಿನ ಕೈಗಾರೀಕರಣದ ಪ್ರಭಾವವು ದಟ್ಟವಾಗಿ ವ್ಯಾಪಿಸಿಕೊಂಡಿತು. ಇದರ ಪ್ರಭಾವದಿಂದ ರಷ್ಯನ್ ಸಮಾಜದಲ್ಲಿ ವಾಸ್ತವತಾವಾದದ ದೃಷ್ಟಿಕೋನವು ಬೆಳೆಯಿತು. ಸಮಾಜದಲ್ಲಿರುವಂತಹ ವಸ್ತುಸ್ಥಿತಿಯನ್ನು ಯಥಾವತ್ತಾಗಿ ಬಿಂಬಿಸುವುದು ಇದರ ನಿಲುವಾಗಿತ್ತು. 19ನೇ ಶತಮಾನದಲ್ಲಿ ಯೂರೋಪಿನ ಕೈಗಾರೀಕರಣದಿಂದ ರಷ್ಯನ್ ಸಮಾಜದಲ್ಲಿ ಉಂಟಾದ ಪ್ರಭಾವವನ್ನು ಗಮನಿಸಿದಾಗ "ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಸ್ಥಿತಿಯು ಬಹಳ ಕಷ್ಟಕರವಾಗಿತ್ತು. ರೈತರು ತಮಗೆ ಜಮೀನುಬೇಕೆಂದೂ, ಸ್ವಾತಂತ್ರ್ಯಬೇಕೆಂದೂ ಬಯಸುತ್ತಿದ್ದರು. ಪಟ್ಟಣಗಳಲ್ಲಿ ಕಾರ್ಖಾನೆಗಳು ಸ್ಥಾಪನೆಯಾಗಿ ಕೆಲಸಗಾರರು ಒಟ್ಟಿಗೆ ಸೇರಲು ಅವಕಾಶವಾಯಿತು. ಬಂಡವಾಳ ಪದ್ಧತಿಯ ಪರಿಣಾಮದಿಂದ ನಾನಾ ಕಷ್ಟಗಳಿಗೆ ಒಳಗಾದ ಕೆಲಸಗಾರರು ತಮ್ಮಲ್ಲಿ ಸಂಘ ಶಕ್ತಿಗಳನ್ನು ಬೆಳೆಯಿಸಿಕೊಂಡು ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಿದ್ದರು. ಮತ್ತು ಶತಮಾನಗಳಿಂದಲೂ ನಿರಂಕುಶ ಪ್ರಭುತ್ವವನ್ನು ನಡೆಸುತ್ತಿದ್ದ ಝಾರ್ ಚಕ್ರವರ್ತಿಗಳ ವಿಷಯದಲ್ಲಿ ಮಧ್ಯಮ ವರ್ಗದ ಜನರೂ, ವಿದ್ಯಾವಂತರೂ ಅಸಂತುಷ್ಟಿ ಹೊಂದಿ ರಾಜಕೀಯ ಸುಧಾರಣೆಗಳನ್ನು ಕೇಳುತ್ತಿದ್ದರು".[8] ಇದಲ್ಲದೇ 1892ರಲ್ಲಿ ರಷ್ಯಾದಲ್ಲೆಲ್ಲಾ ದೊಡ್ಡ ಕ್ಷಾಮ ಉಂಟಾಗಿ ಜನಗಳಿಗೆ ರೊಟ್ಟಿಯು ಸಿಗದ ಪರಿಸ್ಥಿತಿ ಉಂಟಾಯಿತು. ಲೆನಿನ್ ಮತ್ತು ಕಾಲ್‌ಮಾರ್ಕ್ಸ್ ವಿಚಾರಗಳು ಕೈಗಾರೀಕರಣ ಕ್ರಾಂತಿಯ ಸಂದರ್ಭದಲ್ಲಿ ಮುಖ್ಯವಾಗಿದೆ. ರೈತರು ಮತ್ತು ಜನಸಾಮಾನ್ಯರು ಹಳ್ಳಿಯನ್ನು ಬಿಟ್ಟು ನಗರಗಳಿಗೆ ಕೆಲಸ ಹುಡುಕಿ ಹೊರಟು ಅಲ್ಲಿನ ಕಾರ್ಖಾನೆಗಳ ಮಾಲೀಕರ ಶೋಷಣೆಗೆ ಒಳಗಾಗಿ ಅವರ ಬದುಕು ಮತ್ತಷ್ಟು ಸಂಕಷ್ಟಗಳಿಗೆ ಒಳಗಾದ ರೀತಿಯನ್ನು ತಿಳಿಯಲಾಗುತ್ತದೆ. ಮನುಷ್ಯನು ನಿಸರ್ಗದಿಂದ ದೂರವಾಗಿ ಬದುಕನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ ತನ್ನ ಬದುಕನ್ನು ಹೇಗೆ ದುರಂತಕ್ಕೆ ಒಳಗಾಗುತ್ತಾನೆ ಎಂದು ರಷ್ಯನ್ ಬರಹಗಾರರ ಕಾದಂಬರಿಗಳ ಹಿನ್ನೆಲೆಯಲ್ಲಿ ಗುರುತಿಸಲಾಗುತ್ತದೆ. ಝಾರ್‌ಗಳ ನಿರಂಕುಶ ಪ್ರಭುತ್ವದಿಂದ ಬಿಡುಗಡೆ ಪಡೆದು ಬದುಕನ್ನು ರೂಪಿಸಿಕೊಳ್ಳುವ ಕಡೆಗೆ ಸಾಗಿದ ಜನ ಸಾಮಾನ್ಯರ ಬದುಕು ಆಧುನಿಕರಣಕ್ಕೆ ಒಳಗಾಗಿ ಮತ್ತಷ್ಟು ಬದುಕು ದುರಂತವಾಯಿತು. ಅಲ್ಪ ದುಡಿತದ ಪ್ರತಿಫಲದಿಂದ ಜೀವನದ ನಿರ್ವಹಣೆ ಸಾಧ್ಯವಾಗದೆ ಮೂಲಭೂತ ಸೌಕಾರ್ಯಗಳ ಸೌಲಭ್ಯದಿಂದ ವಂಚಿತರಾಗಿದ್ದ ಇವರ ಪರವಾಗಿ ಹಲವು ಸಂಘಟನೆ ಮತ್ತು ಪಕ್ಷಗಳ ರೂಪಿತವಾದವು. 19ನೇ ಶತಮಾನದಲ್ಲಿ ರಷ್ಯದಲ್ಲಿ ಆಧುನಿಕತೆಯ ಪ್ರಭಾವದಿಂದ ಬಂಡವಾಳ ಪದ್ಧತಿಯು ಮುಂದುವರೆಯಿತು. 20ನೇ ಶತಮಾನದ ಪ್ರಾರಂಭದ ವೇಳೆಗೆ ರಷ್ಯದಲ್ಲಿ ಕೈಗಾರಿಕೆ, ಗಣಿಗಳಲ್ಲಿ, ರೈಲ್ವೆಗಳಲ್ಲಿ ಆಧುನಿಕ ಶ್ರಮಜೀವಿಗಳು ಕಾರ್ಯವನ್ನು ನಿರ್ವಹಿಸುತ್ತಿದ್ದರು. ರಷ್ಯನ್ ಸಮಾಜದಲ್ಲಿ ಶ್ರಮಜೀವಿಗಳ ಸ್ಥಿತಿಯು ಕಠಿಣವಾಗಿತ್ತು. ಇವುಗಳ ಪರಿಣಾಮದಿಂದ ಕಾರ್ಮಿಕರು ಮುಷ್ಕರವನ್ನು ಮಾಡಲು ಪ್ರಾರಂಭಿಸಿದರು. ನಂತರ ಕಾರ್ಮಿಕ ಸಂಘ ಪ್ರಾರಂಭವಾಗಿ ತಮಗೆ ಸಿಗಬೇಕಾದಂತಹ ಸೌಕಾರ್ಯಗಳಿಗಾಗಿ ಚಳುವಳಿಯನ್ನು ನಡೆಸಿದರು. ಸಂಘದ ಉದ್ದೇಶ 'ಸಮಾಜವಾದಿ ಕ್ರಾಂತಿ' ಆಗಿತ್ತು. "ಕೈಗಾರಿಕಾ ಕ್ರಾಂತಿಯ ನಂತರ ಯೂರೋಪಿನ ವಾಸ್ತವ ಬದಲಾಗುತ್ತಿದ್ದಂತೆ ಆ ಕಾಲ, ದೇಶಗಳ ಪರಿವರ್ತನೆಯ ಸಂದರ್ಭದಲ್ಲಿ ವಾಸ್ತವತಾವಾದೀ ಪರಿಕಲ್ಪನೆ ಹೆಚ್ಚಿನ ನಿರ್ದಿಷ್ಟತೆ ಮತ್ತು ನಿರ್ಣಾಯಕ ನೆಲೆಗಳನ್ನು ತಲುಪಿತು. ಯೂರೋಪಿನ ಬೇರೆ ಬೇರೆ ರಾಜ್ಯಗಳ ಪ್ರಾದೇಶಿಕ ಸತ್ವವನ್ನು ಹೀರಿಕೊಂಡು ಬಲಿಯಿತು. ಹಲವು ಶತಮಾನಗಳ ಕಾಲ ನಿಂ ನೀರಾಗಿದ್ದ ಯೂರೋಪಿನ ಬದುಕು ಹೊಸ ವಾಸ್ತವವೊಂದರತ್ತ ಹೊರಳಿಕೊಳ್ಳುತ್ತಿದ್ದಂತೆ ವಾಸ್ತವವಾದೀ ಪರಿಕಲ್ಪನೆ ಸಾಹಿತ್ಯ ಕೃತಿಗಳಲ್ಲಿ ಮತ್ತು ವಿಮರ್ಶೆಗಳಲ್ಲಿ ಹೆಚ್ಚು ನಿಚ್ಚಳವಾಗಿ ಮೂಡಿಬಂದಿತು. ಏಶಿಯಾ ಆಫ್ರಿಕಾ ಖಂಡಗಳಿಗೆ ವಸಾಹತುಶಾಹೀ ಪ್ರವೇಶದ ಸಂದರ್ಭದಲ್ಲಿ ವಾಸ್ತವತಾವಾದ ಬೇರೊಂದು ನೆಲೆಯಲ್ಲಿ ಅಲ್ಲಿನ ಬೌದ್ಧಿಕ ಪ್ರಪಂಚವನ್ನು ಪ್ರವೇಶಿಸಿತು".[9] ಎಂದು ತಿಳಿಯಲಾಗುತ್ತದೆ. ರಷ್ಯನ್ ಸಮಾಜದಲ್ಲಿ ಸಮತವಾದ ಮತ್ತು ಸಮಾಜವಾದ ಸೃಷ್ಟಿಸುವುದು ಮುಖ್ಯ ಉದ್ದೇಶವಾಗಿತ್ತು. ಆದುದರಿಂದ 1917ರಲ್ಲಿ ರಷ್ಯದೇಶದ ಕಾರ್ಮಿಕ ವರ್ಗ ಕಮ್ಯೂನಿಸ್ಟ್ ಪಕ್ಷದ ಮುಖಂಡತ್ವದಲ್ಲಿ ಸಮಾಜ ಕ್ರಾಂತಿಯನ್ನು ನಡೆಸಿತು. ಲೆನಿನ್ ವಿಚಾರಗಳು ರಷ್ಯನ್ ಕ್ರಾಂತಿಯಲ್ಲಿ ಮಹತ್ವವನ್ನು ಪಡೆದಿದೆ. "ಶೋಷಿತ ವರ್ಗದ ಬೇಡಿಕೆಯಾದ ಆರ್ಥಿಕ ಸಮಾನತೆಯು ಸಮಾಜವಾದೀ ಆರ್ಥಿಕ ವ್ಯವಸ್ಥೆಯ ಸ್ಥಾಪನೆಯ ಮೂಲಕ ಬರುವುದಾಗಿಯೂ ಸಮಾಜವಾದೀ ವ್ಯವಸ್ಥೆಯ ಅನಿವಾರ್ಯತೆಯನ್ನು ರಷ್ಯಾ ದೇಶದ ಸ್ಥಿತಿಗತಿಗಳು ಸಾಧ್ಯ ಮಾಡಿಕೊಟ್ಟಿರುವುದಾಗಿಯೂ"[10] ಲೆನಿನ್ ವಿವರಿಸುತ್ತಾರೆ. ಬಂಡವಾಳ ಆರ್ಥಿಕ ವ್ಯವಸ್ಥೆಯನ್ನು ಹೋಗಲಾಡಿಸಿ ಸಮಾಜವಾದಿ ಆರ್ಥಿಕ ವ್ಯವಸ್ಥೆ ರಷ್ಯದಲ್ಲಿ ಸ್ಥಾಪಿಸುವಂತೆ ಕಾರ್ಮಿಕ ವರ್ಗದವರಿಗೆ

[7] ಬೆಟ್ಟದ ಜೀವ: ಡಾ.ಕೆ.ಶಿವರಾಮ ಕಾರಂತ, ಮರು ಮುದ್ರಣ ೨೦೧೦, ಸಪ್ನ ಬುಕ್ ಹೌಸ್ ಬೆಂಗಳೂರು, ಪುಟ ಸಂಖ್ಯೆ ೭೪.

[8] ಆಧುನಿಕ ಯೂರೋಪಿನ ಚರಿತ್ರೆ: ಡಾ.ಎಸ್.ಎನ್.ಶಿವರುದ್ರಪ್ಪಸ್ವಾಮಿ, ೫ನೇ ಮುದ್ರಣ ೨೦೧೩, ಪೌರಸ್ತ್ಯ ಪ್ರಕಾಶನ ಮೈಸೂರು, ಪುಟ ಸಂಖ್ಯೆ ೫೧೨.

[9] ವಾಸ್ತವವಾದ:ಟಿ.ಪಿ.ಅಶೋಕ, ೨ನೇ ಮುದ್ರಣ ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪುಟ ಸಂಖ್ಯೆ ೧೪.

[10] ಕಮ್ಯೂನಿಸಂ: ಸಂ:ಡಾ.ಕೆ.ವಿ.ಪುಟ್ಟಪ್ಪ, ೧ನೇ ಮುದ್ರಣ ೧೯೫೭, ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು, ಪುಟ ಸಂಖ್ಯೆ ೯೬.

ಕರೆಯನ್ನು ಸಹ ನೀಡಿದರು. ಆ ಕರೆಯ ವಿವರಣೆ ಹೀಗಿದೆ "ಕಾರ್ಮಿಕರ ವಿಮೋಚನೆ, ಶೋಷಣೆಯ ನಾಶ, ವರ್ಗಗಳ ನಾಶ, ಎಲ್ಲವೂ ರಷ್ಯ ದೇಶದ ಬಂಡವಾಳ ವರ್ಗವನ್ನೂ ಅದಕ್ಕೆ ಆಶ್ರಯದಾತವಾಗಿರುವ ರಷ್ಯಾದ ರಾಜ ಮನೆತನ, ಅದರ ಪೀಳಿಗೆಯವರು ಮತ್ತು ಹಿಂಬಾಲಕರನ್ನು ಸದೆ ಬಡಿಯುವುದರಲ್ಲೂ ಮತ್ತು ಕಾರ್ಮಿಕರ ಆಡಳಿತದ ಘೋಷಣೆಯಲ್ಲೂ ಅಡಗಿರುವುದಾಗಿ ತಿಳಿಸಿದನು".[11] ರೈತರು ಕ್ರಾಂತಿಯ ನಂತರ ಕೆಲಸ ಹುಡುಕಿ ನಗರಗಳಿಗೆ ವಲಸೆ ಹೋಗುತ್ತಿದ್ದರು. ಕೆಲವರು ಜಮೀನ್ದಾರರ ಬಳಿ ಜೀತಪದ್ಧತಿಯಿಂದ ದುಡಿಯುತ್ತಿದ್ದರು. 'ಉಳುವವನಿಗೆ ಭೂಮಿ' ಎಂಬ ಘೋಷಣೆಯಿದ್ದರು ಸಹ ರೈತರಿಗೆ ಮಾತ್ರ ಈ ಸೌಲಭ್ಯವಿರಲಿಲ್ಲ. ಕೈಗಾರಿಕಾ ಕ್ರಾಂತಿಯ ಪರಿಣಾಮಗಳು ಸಾಮಾಜಿಕ ವ್ಯಕ್ತಿಯ ಜೀವನದಲ್ಲಿ ಉಂಟುಮಾಡಿದ ತಲ್ಲಣಗಳು ಮತ್ತು ಎದುರಿಸಿದ ಸಮಸ್ಯೆಗಳು 19ನೇ ಶತಮಾನದಲ್ಲಿ ವ್ಯಾಪಿಸಿಕೊಂಡಿದ್ದವು ಎಂಬುದನ್ನು ತಿಳಿಯಲಾಗುತ್ತದೆ.

ಈ ಹಿನ್ನೆಲೆಯಲ್ಲಿ ರಷ್ಯನ್ ಬರಹಗಾರರಾದ ಟಾಲ್‌ಸ್ಟಾಯ್ ಕಾದಂಬರಿಗಳ ಹಿನ್ನೆಲೆಯಲ್ಲಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳ ಸ್ವರೂಪವನ್ನು "ಅನ್ನಾಕರೇನಿನ" ಕಾದಂಬರಿಯಲ್ಲಿ ಗುರುತಿಸಲಾಗುತ್ತದೆ. ಯೂರೋಪಿನ ಕೈಗಾರೀಕರಣದ ಪ್ರಭಾವದಿಂದ ಸಾಮಾಜಿಕ, ಧಾರ್ಮಿಕ, ರಾಜಕೀಯವಾಗಿ ಬಾಹ್ಯದಲ್ಲಿ ಬದಲಾವಣೆಯಾಗುವುದರ ಜೊತೆಗೆ ಆತರಿಕವಾಗಿ ಕರೆನಿನ್, ವ್ರಾಂಸ್ಕಿ, ಅನ್ನಾಳ ಸಂಬಂಧಗಳಲ್ಲಿ ಛಿದ್ರತೆ ಉಂಟಾಗುತ್ತದೆ. ಮನುಷ್ಯನು ಹೊರ ಜಗತ್ತಿಗೆ ಆಕರ್ಷಣೆ ಆಗುವುದರ ಜೊತೆಗೆ ಕ್ರಮೇಣವಾಗಿ ಅವುಗಳ ಪರಿಣಾಮವು ವ್ಯಕ್ತಿಯ ಸಂಬಂಧಗಳಲ್ಲಿ ವ್ಯಕ್ತವಾಗುತ್ತವೆ. ಅಬ್ಲಾನ್‌ಸ್ಕಿ ನಗರ ಜೀವನದ ಬಗೆಗೆ ಆಸಕ್ತಿಯನ್ನು ಹೊಂದಿದ್ದರೆ ಈತನ ಗೆಳೆಯ ಲೆವಿನ್ ಗ್ರಾಮೀಣ ಬದುಕು, ರೈತಪರ ನಿಲುವುಗಳನ್ನು ಹೊಂದಿರುತ್ತಾನೆ. ಅನ್ನಾ ಆಧುನಿಕ ಬದುಕನ್ನು ಕಟ್ಟಿಕೊಳ್ಳಲು ಹೋಗಿ ತನ್ನ ಬದುಕನ್ನು ದುರಂತ ಮಾಡಿಕೊಳ್ಳುವಳು. ಡಾಲಿ ಮತ್ತು ಕಿಟ್ಟಿ ಕೌಟುಂಬಿಕ ಜೀವನದಿಂದ, ನಿಯಮಗಳಿಂದ ಹೊರಬರಲು ಸಾಧ್ಯವಾಗದೆ ಅಲ್ಲಿಯೇ ತಮ್ಮ ಬದುಕನ್ನು ಉತ್ತಮವಾಗಿ ರೂಪಿಸಿಕೊಳ್ಳುವುದನ್ನು ತಿಳಿಯುತ್ತೇವೆ. ಆಧುನಿಕತೆಯ ಪ್ರಭಾವಕ್ಕೆ ಒಳಗಾದ ರಷ್ಯನ್ ಸಮಾಜದಲ್ಲಿ ಹೆಣ್ಣಿಗೆ ಬದುಕಿನ ಆಯ್ಕೆಯಿದ್ದರೂ ಡಾಲಿಗೆ ದಾಂಪತ್ಯದ ಸಂಬಂಧದಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಡಾಲಿಗೆ ಆಸೆ, ಆಕಾಂಕ್ಷೆಗಳು ಇದ್ದರೂ ಕುಟುಂಬದೊಳಗೆ ತನ್ನ ಬದುಕನ್ನು ಮತ್ತು ಸಂಬಂಧವನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತಾಳೆ. ಕಾರಣ ತನ್ನ ಮಕ್ಕಳು ಮತ್ತು ಅವರ ಭವಿಷ್ಯಕ್ಕಾಗಿ. ಯೂರೋಪಿನ ಆಧುನಿಕತೆಯ ಬಾಹ್ಯ ಜಗತ್ತಿಗೆ ಒಳಗಾಗಿ ಮನುಷ್ಯ ತನ್ನ ಸಂಬಂಧವನ್ನು ದುರುಪಯೋಗ ಪಡಿಸಿಕೊಳ್ಳುವುದು ಕಂಡುಬರುತ್ತದೆ. ಗಂಡನ ನಡಾವಳಿಕೆಯಿಂದ ಬೇಸತ್ತು ಬಿಡುಗಡೆಯ ಹಂಬಲವಿದ್ದರೂ, ಪರಿಸ್ಥಿತಿಯೊಂದಿಗೆ ಬದುಕನ್ನು ನಡೆಸುವ ನಿರ್ಧಾರವನ್ನು ಡಾಲಿಯು ಮಾಡುವಳು. ತನ್ನ ನಾದಿನಿ ಅನ್ನಾಳಲ್ಲಿ ತನ್ನ ಪರಿಸ್ಥಿತಿಯನ್ನು ಹೇಳಿಕೊಳ್ಳುವ ಯೋಚನೆ ಮಾಡಿ, ತಕ್ಷಣವೇ ತನ್ನ ಆತ್ಮಗೌರವಕ್ಕೆ ಧಕ್ಕೆ ತರುವ ವಿಷಯವೆಂದು ಸುಮ್ಮನಾಗುವಳು. ಮನುಷ್ಯ ಸಂಬಂಧದ ತಳಹದಿ ನಂಬಿಕೆ. ಅಬ್ಲಾನ್‌ಸ್ಕಿಯ ತಂಗಿ ಅನ್ನಾ, ಡಾಲಿಯ ಜೊತೆಗೆ ಆಕೆಯ ಮನಸ್ಥಿತಿ ಮತ್ತು ಕುಟುಂಬದ ಪರಿಸ್ಥಿತಿಯನ್ನು ಚರ್ಚಿಸಿ ಡಾಲಿಯ ಮನಪರಿವರ್ತನೆ ಮಾಡುತ್ತಾಳೆ. ಡಾಲಿಯು ತನ್ನ ಮಹತ್ವಕಾಂಕ್ಷೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಅನ್ಯೋನ್ಯತೆಯ ಸಂಬಂಧದ ಕಡೆಗೆ ಚಲಿಸುತ್ತಾಳೆ. ಡಾಲಿಯು ಆಧುನಿಕ ರಷ್ಯನ್ ಸಮಾಜದ ಆಕರ್ಷಣೆಗೆ, ಜೀವನ ಶೈಲಿಗೆ ಒಳಗಾಗದೆ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಸಂಬಂಧದಲ್ಲಿ ಹೋರಾಟವನ್ನು ಮಾಡುತ್ತಾಳೆ.

ಅನ್ನಾಳ ವರ್ತನೆ ತಿಳಿದ ಕರೆನಿನ್ ಸಾಮಾಜಿಕ ಪರಿಸ್ಥಿತಿ, ಮದುವೆ, ಕುಟುಂಬದ ಬಗೆಗಿನ ತಾತ್ವಿಕ ವಿಚಾರಗಳನ್ನು ಹೇಳಿದರೂ ಅನ್ನಾ ವ್ರಾಂಸ್ಕಿಯ ಮೋಹದಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಈಕೆ ಆಧುನಿಕ ಮಹಿಳೆಯ ಪ್ರತಿನಿಧಿಯಾಗಿದ್ದಾಳೆ. ರಷ್ಯನ್ ಸಮಾಜದ ಸಂಪ್ರದಾಯವನ್ನು ಧಿಕ್ಕರಿಸಿ ತನಗೆ ಬೇಕಾದ ಬದುಕನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಇವರಿಬ್ಬರು ಸಮಾಜವನ್ನು ಬಿಟ್ಟು ತಮ್ಮದೇ ಒಂಟಿತನದ ಜೀವನವನ್ನು ನಡೆಸಿದರೂ ಸಹ ಸಮಾಜದ ದೂರುಗಳಿಗೆ ಗುರಿಯಾಗಬೇಕಾಗುತ್ತದೆ. ಇವರಿಬ್ಬರ ಪ್ರೀತಿ ಕ್ರಮೇಣ ಅನುಮಾನ, ಗೊಂದಲಗಳಿಗೆ ಸಿಲುಕುತ್ತದೆ. ವ್ರಾಂಸ್ಕಿ ಅನ್ನಾಳ ಪ್ರೀತಿಯಿಂದ ಹೊರಬಂದಾಗ ಈಕೆ ಮಾನಸಿಕ ತೊಳಲಾಟಕ್ಕೆ ಗುರಿಯಾಗುತ್ತಾಳೆ. ನಂತರ ಮನಸ್ಸಿನ ದ್ವಂದ್ವ ಯೋಚನೆಯಲ್ಲಿ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆಧುನಿಕತೆಯ ಪ್ರಭಾವದ ವಿವೇಚನೆ ಇಲ್ಲದೆ ಹೆಣ್ಣು ಹೇಗೆ ದುರಂತವನ್ನು ಕಾಣುತ್ತಾಳೆ ಎಂಬ ಪ್ರತಿನಿಧಿಯಂತೆ ಅನ್ನಾಳ ಪಾತ್ರವು ಕಂಡುಬರುತ್ತದೆ. ತನ್ನ ಬದುಕಿನ ಸಂಬಂಧದ ಆಯ್ಕೆಯಲ್ಲಿ ಸಂಕಷ್ಟಗಳಿಗೆ ಸಿಲುಕಿ ಎಲ್ಲೂ ನೆಲೆ ಕಾಣಲು ಸಾಧ್ಯವಾಗದಿರುವುದನ್ನು ಕಾಣುತ್ತೇವೆ. ಈ ಕಾದಂಬರಿಯಲ್ಲಿ ಕಂಡುಬರುವ ಮತ್ತೊಂದು ಪಾತ್ರವಾದ ಲೆವಿನ್ ಸಮಾಜ ಸುಧಾರಕನಾಗಿ ಮತ್ತು ಮನುಷ್ಯ ಸಂಬಂಧಗಳ ಆದರ್ಶ ಜೀವನದ ಕಡೆಗೆ ಒಲವನ್ನು ಪಡೆದವನು. ಈತ ತನ್ನ ಸಹಚರರೊಂದಿಗೆ ರಷ್ಯನ್ ಸಾಮಾಜಿಕ, ರಾಜಕೀಯ, ಕಾರ್ಮಿಕರ ಪರಿಸ್ಥಿತಿಯನ್ನು ಕುರಿತು ಚರ್ಚಿಸುವ ಮನೋಧರ್ಮದನು. ರೈತಪರ ಕಾಳಜಿಯಿಂದ ವರ್ಗ ತಾರತಮ್ಯವನ್ನು ಹೋಗಲಾಡಿಸಬೇಕೆಂಬ ಹಂಬಲವುಳ್ಳವನು. ಮಾಸ್ಕೊ ಮತ್ತು ಪೀಟರ್ಸ್ ಬರ್ಗ್ ನಗರಗಳಿಗೆ ಕೆಲವೊಮ್ಮೆ ಬಂದಾಗ ಭಾವೋದ್ವೇಗಕ್ಕೆ ಒಳಗಾಗುತ್ತಿದ್ದನು. ಸರಳ ವ್ಯಕ್ತಿತ್ವ, ಶ್ರಮ ಜೀವಿಯಾದ ಈತ ಹಳ್ಳಿಯ ಬದುಕಿಗೆ ಬೆಲೆ ಕೊಡುವವನು. ಆಧುನಿಕ ರಷ್ಯನ್ ಸಮಾಜದ ವೈಭವೀಕರಣಕ್ಕೆ ಒಳಗಾಗಿರಲಿಲ್ಲ. ಒಮ್ಮೆ ದೂರದ ಹಳ್ಳಿಯೊಂದರ ರೈತನೊಡನೆ ಮಾತಾಡುವಾಗ "ನಾನೀಗ ಕೆಲಸ ಮಾಡುವ ಅಗತ್ಯತೆಯಿದೆ, ದುಡಿಯಲು ಸಾಕಷ್ಟು ಕಾರಣವಿದೆ, ನಾನು ದುಡಿಯಬೇಕಾದ್ದು ನನಗಾಗಿ ಅಲ್ಲ ಸಮಾಜದ ಕಲ್ಯಾಣಕ್ಕಾಗಿ ಬೇಸಾಯದಲ್ಲಿ ಸಂಪೂರ್ಣ ಬದಲಾವಣೆ ಅತ್ಯವಶ್ಯವಾಗಿದೆ. ಜನತೆಯ ಮೂಲಭೂತ ಸ್ಥಿತಿಗತಿಗಳಲ್ಲಿ ಪರಿವರ್ತನೆ ಆಗಬೇಕಾಗಿದೆ"[12] ಎಂದು ಹೇಳುತ್ತಾನೆ. ತಾನು ರೂಪಿಸಿಕೊಂಡ ಆದರ್ಶ ಬದುಕಿನ ನಿಲುವುಗಳು ಮತ್ತು ಶ್ರಮಜೀವಿಯ ಬದುಕು ಸಮಾಜದಲ್ಲಿ ರೂಪಿತವಾಗಬೇಕೆಂದು ಬಯಸಿದನು. ಯಂತ್ರಗಾರಿಕೆ, ಬಂಡವಾಳ ಪದ್ಧತಿ, ಭೂಮಾಲೀಕರು, ಶ್ರೀಮಂತರ ದಬ್ಬಾಳಿಕೆ ಮತ್ತು ವರ್ಗತಾರತಮ್ಯದಿಂದ ಉಂಟಾದ ಸಮಸ್ಯೆಗಳನ್ನು ತಮ್ಮ ನಿಕೋಲಾಯ್‌ಯೊಂದಿಗೆ ಚರ್ಚಿಸುವನು. ಕಿಟ್ಟಿಯು ಮೊದಲು ವ್ರಾಂಸ್ಕಿಯ ಮೋಹದ ಆಕರ್ಷಣೆಗೆ ಒಳಗಾಗಿ ಲೆವಿನ್‌ನ ಪ್ರೀತಿಯನ್ನು ನಿರಾಕರಿಸುತ್ತಾಳೆ. ಕೆಲವೊಮ್ಮೆ ಲೆವಿನ್‌ನ ಪ್ರೀತಿಯನ್ನು ಒಪ್ಪುವ ನಿಲುವಿದ್ದರೂ ಈಕೆಯ ಮನಸ್ಸು ಆಕರ್ಷಣೆಯ ಬದುಕಿನ ಕಡೆಗೆ ಚಲಿಸುವ ಕಾರಣ ದ್ವಂದ್ವತೆಯಿಂದ ನಿರಾಕರಿಸುತ್ತಾಳೆ. ಕಿಟ್ಟಿ ಆಧುನಿಕ ಸ್ತ್ರೀಯಾಗಿ ಕಂಡುಬಂದರೂ ಆಕೆಯ ಆಲೋಚನೆ ಸಂಪ್ರದಾಯವಾದಿ ನಿಲುವುಗಳಿಗೆ ಒಳಗಾಗುತ್ತದೆ. ಈಕೆ ವೈಭವದ

[11] ಕಮ್ಯೂನಿಸಂ: ಸಂ:ಡಾ.ಕೆ.ವಿ.ಪುಟ್ಟಪ್ಪ, ೧ನೇ ಮುದ್ರಣ ೧೯೫೭, ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು, ಪುಟ ಸಂಖ್ಯೆ ೯೬.

[12] ಅನ್ನಾಕರೇನಿನ: ಅನು:ದೇ.ಜವರೇಗೌಡ, ೨ನೇ ಮುದ್ರಣ ೨೦೦೬, ಸಿ.ವಿ.ಜಿ ಪಬ್ಲಿಕೇಷನ್ಸ್ ಬೆಂಗಳೂರು, ಪುಟ ಸಂಖ್ಯೆ ೧೨೪.

ಜೀವನವನ್ನು ಆಯ್ಕೆ ಮಾಡಿಕೊಳ್ಳದೆ ವಾಸ್ತವಿಕ ಜೀವನದಲ್ಲಿ ಲೆವಿನ್‌ನನ್ನು ಮದುವೆಯಾಗಿ ಗಂಡ, ಮಗು, ಕುಟುಂಬದ ಆದರ್ಶದ ಸಂಬಂಧದಲ್ಲಿ ಬದುಕನ್ನು ಕಟ್ಟಿಕೊಳ್ಳುವ ರೀತಿಯನ್ನು ಕಾಣುತ್ತೇವೆ. ಕಿಟ್ಟಿಯ ಸ್ವಭಾವದಲ್ಲಿ ಸಂಕೋಚ, ಅನುಮಾನ, ದ್ವಂದ್ವಗಳು ಬದುಕಿನಲ್ಲಿ ಉಂಟಾಗುತ್ತಿರುತ್ತದೆ. ಲೆವಿನ್ ಮತ್ತು ಕಿಟ್ಟಿಯ ಸಂಬಂಧವು ಪ್ರೀತಿ, ವಿಶ್ವಾಸ, ನಂಬಿಕೆಗಳಿಂದ ಒಂದು ಆದರ್ಶದ ಪ್ರತೀಕದಂತೆ ಕಂಡುಬರುತ್ತದೆ.

ನಿಕೊಲಾಯ್ ಗೊಗೋಲ್‌ರವರು ತಮ್ಮ ಕಾಲದ ರಷ್ಯನ್ ಸಮಾಜದ ವಾಸ್ತವಿಕ ಚಿತ್ರಣವನ್ನು ಬಿಂಬಿಸಿರುವರು. ತಮ್ಮ ಕಾಲದ ಸಾಮಾಜಿಕ, ರಾಜಕೀಯ, ಆರ್ಥಿಕ ವ್ಯವಸ್ಥೆಯನ್ನು ವಿಡಂಬಿಸಿದ್ದಾರೆ. "ಓವರ್ ಕೋಟ್" ಕಾದಂಬರಿಯಲ್ಲಿ ಅಧಿಕಾರಶಾಹಿ ವ್ಯವಸ್ಥೆಯನ್ನು ವಿಶ್ಲೇಷಿಸಿದ್ದಾರೆ. ಮನುಷ್ಯ ಮತ್ತು ಸೈತಾನರ ನಡುವಿನ ಹೋರಾಟದ ರೀತಿಯಲ್ಲಿ ತಿಳಿಸಿದ್ದಾರೆ. ಈ ಕೃತಿಯಲ್ಲಿ ಮನುಷ್ಯನ ಅಂತರಂಗ ಮತ್ತು ಸಾಮಾಜಿಕ ಜೀವನ ವ್ಯವಸ್ಥೆಯನ್ನು ಒಳಗೊಂಡ ಚಿತ್ರಣವಿದೆ. ಅಕಾಕಿ ಅಕಾಕಿಯೆವಿಚ್ ಒಬ್ಬ ಕಾರಕೂನನಾಗಿದ್ದು 'ಅವನು ತನ್ನ ಕೆಲಸವನ್ನು ಕೇವಲ ಕಾರ್ಯತತ್ಪರತೆಯಿಂದ ದುಡಿಯುತ್ತಿರಲಿಲ್ಲ. ಪ್ರೀತಿಯಿಂದ ಕೆಲಸ ಮಾಡುತ್ತಿದ್ದ' ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಬಟ್ಟೆಯನ್ನು ಕೇಂದ್ರ ವಸ್ತುವಾಗಿ ಆಯ್ಕೆಮಾಡಿಕೊಂಡು ಅದರ ಸುತ್ತಣ ರಚಿಸಿರುವ ಕಥನಾ ಶೈಲಿಯು ವಿಶೇಷವಾಗಿರುವುದು. ಈತ ತನ್ನ ಬಳಿಯಿದ್ದ ಹಳೆಯ ಕೋಟ್ ಸವೆದು ಹೋದಾಗ ಸೇಂಟ್ ಪೀಟರ್ ಬರ್ಗ್ ಹಿಮದ ಚಳಿಯ ಒತ್ತಡದಿಂದ ಪೆಟ್ರೊವಿಚ್‌ನ ಬಳಿ ಹೊಸದನ್ನು ಹೊಲಿಸಿಕೊಳ್ಳುವ ನಿರ್ಧಾರ ಮಾಡಿದ್ದು, ದುಬಾರಿಯ ಓವರ್ ಕೋಟ್ ಪಡೆದ ನಂತರ ಸಂತೋಷದ ಸಮಾರಂಭ ಏರ್ಪಾಡು ಮಾಡಿ ಆಮೇಲೆ ತನ್ನ ಹೊಸ ಓವರ್‌ಕೋಟ್‌ನ ದರೋಡೆಯಾದಾಗ ಪೋಲಿಸರಿಗೆ ದೂರು ಕೊಡುವುದು ನಂತರ ತೀವ್ರ ಜ್ವರದಿಂದ ಮಾನಸಿಕವಾಗಿ ಬಳಲಿ ಸಾಯುವುದು. ದೆವ್ವದ ರೂಪದಲ್ಲಿ ಓವರ್‌ಕೋಟ್ ಧರಿಸಿದ ಜನರ ಬಳಿ ಕಾಡಿಸುವುದು. ಕೊನೆಗೆ ಪ್ರಮುಖ ವ್ಯಕ್ತಿ ಕೋಟ್ ಪಡೆದ ಅಕಾಕಿ ಅಕಾಕಿಯೆವಿಚ್ ದೆವ್ವದ ರೂಪ ಕಣ್ಮರೆ. ಈ ಕಾದಂಬರಿಯಲ್ಲಿ ವರ್ಗ ತಾರತ್ಯಮದ ಹಿನ್ನೆಲೆಯು ಕಂಡುಬರುತ್ತದೆ. ಮೇಲ್‌ದರ್ಜೆಯ ವ್ಯಕ್ತಿ ಕೆಳದರ್ಜೆಯ ವ್ಯಕ್ತಿಯೊಂದಿಗೆ ನಡೆದುಕೊಳ್ಳುವ ರೀತಿ, ವ್ಯಕ್ತಿಯ ಬದುಕಿನ ಮೂಲಭೂತ ಅವಶ್ಯಕತೆಗೆ ಬಟ್ಟೆ ಎಷ್ಟು ಮಹತ್ವವನ್ನು ಪಡೆದಿದೆ ಎಂಬುದನ್ನು ಕಾಣಬಹುದಾಗಿದೆ. ಜೊತೆಗೆ ಕಥಾ ನಾಯಕನ ಸ್ವಭಾವ, ಮಾನಸಿಕ ದ್ವಂದ್ವತೆ ಕಳೆದುಹೋದ ವಸ್ತುವಿನ ಹುಡುಕಾಟದಲ್ಲಿ ತೊಡಗುವ ವಿಚಾರಗಳನ್ನು ಗುರುತಿಸಲಾಗಿದೆ. ಈ ಕಿರುಕಾದಂಬರಿಯಲ್ಲಿ ಅಧಿಕಾರಶಾಹಿ ವ್ಯವಸ್ಥೆಯನ್ನು ಹೇಳುತ್ತಾ ಮನುಷ್ಯನ ಮಾನಸಿಕ ಸ್ಥಿತಿಯನ್ನು ತಿಳಿಸಿದ್ದಾರೆ. 'ಓವರ್‌ಕೋಟ್' ಕಾದಂಬರಿಯಲ್ಲಿ ಮನುಷ್ಯ ಸಂಬಂಧವು ವರ್ಗಸಂಘರ್ಷದ ರೀತಿಯಲ್ಲಿ ಕಂಡುಬರುತ್ತದೆ.

ಒಟ್ಟಾರೆಯಾಗಿ ಕನ್ನಡ ಹಾಗೂ ರಷ್ಯನ್ ಸಾಹಿತ್ಯದಲ್ಲಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳ ಸ್ವರೂಪವನ್ನು ಕುವೆಂಪು, ಶಿವರಾಮ ಕಾರಂತ ಹಾಗೂ ಟಾಲ್‌ಸ್ಟಾಯ್, ನಿಕೊಲಾಯ್ ಗೊಗೋಲ್ ಕಾದಂಬರಿಗಳನ್ನು ಅನುಲಕ್ಷಿಸಿ ಗುರುತಿಸಲಾಗಿದೆ. ನವೋದಯ ಸಂದರ್ಭದಲ್ಲಿ ವಾಸ್ತವತಾವಾದದ ಪರಿಕಲ್ಪನೆಯು ಆಯಾ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ವಿಚಾರಗಳನ್ನು ರಷ್ಯನ್ ಬರಹಗಾರರು ವ್ಯಕ್ತಪಡಿಸಿದರು. ಸಮಸ್ಯೆಗಳು ಭಿನ್ನವಾಗಿದ್ದರೂ ಆಧುನಿಕತೆಗೆ ಸ್ಪಂದಿಸಿರುವುದರಲ್ಲಿ ಸಾಮ್ಯತೆ ಇರುವುದರಿಂದ ಆಧುನಿಕತೆಯು ನಿಸರ್ಗ ಮತ್ತು ಮನುಷ್ಯ ಸಂಬಂಧಗಳಲ್ಲಿ ಉಂಟುಮಾಡಿದ ತಲ್ಲಣ, ದ್ವಂದ್ವತೆಯ ಸ್ವರೂಪವನ್ನು ವಿವರಿಸಲಾಗಿದೆ. 19 ಮತ್ತು 20ನೇ ಶತಮಾನದಲ್ಲಿ ರೂಪಗೊಂಡ ಆಧುನಿಕತೆಯು ಒಂದು ಪರಿಕಲ್ಪನೆಯಾಗಿ ಮಾತ್ರವಲ್ಲ, ಬದುಕಿನ ಒಂದು ಪರಿವರ್ತನೆಯ ಪರಿಣಾಮವಾಗಿ ಕಂಡುಬರುತ್ತದೆ. ಆದುದರಿಂದ ಆಧುನೀಕರಣಕ್ಕೆ ಒಳಗಾದ ವ್ಯಕ್ತಿಯು ತನ್ನ ಅಸ್ತಿತ್ವವನ್ನು ಹುಡುಕುವ ನೆಲೆಗಟ್ಟಿನಲ್ಲಿ ಸಾಗುವುದರ ಜೊತೆಗೆ ಆಧುನಿಕತೆಯ ಪ್ರಭಾವ ಹಾಗೂ ನಗರದ ಆಕರ್ಷಣೆಗೆ ಒಳಗಾಗಿ ಬದುಕನ್ನು ದುರಂತ ಮಾಡಿಕೊಳ್ಳುವ ರೀತಿ ಮತ್ತು ಕುಟುಂಬದ ಸಂಬಂಧದಲ್ಲಿ ಉಂಟಾಗುವಂತಹ ವೈಪರೀತ್ಯವನ್ನು ತಿಳಿಯಲಾಗುತ್ತದೆ. ಕನ್ನಡ ಸಂದರ್ಭದಲ್ಲಿ ಕುವೆಂಪುರವರು ನಿಸರ್ಗ, ಆಧ್ಯಾತ್ಮಿಕತೆ, ಮಲೆನಾಡಿನ ವರ್ಣನೆ, ಕೌಟುಂಬಿಕ ಜೀವನ, ಪರಂಪರೆ, ಆಧುನಿಕತೆಯ ವಿಚಾರಗಳನ್ನು ಚಿತ್ರಿಸಿದರೆ, ಶಿವರಾಮಕಾರಂತರು ಕರಾವಳಿ ತೀರದ ಪರಿಸರ, ದಕ್ಷಿಣ ಕನ್ನಡ ಜನಜೀವನ, ಜಾತಿಪದ್ಧತಿ, ಪರಂಪರೆ, ಆಧುನಿಕತೆಯನ್ನು ವ್ಯಕ್ತಪಡಿಸಿರುವರು. ಇವರಿಬ್ಬರು ಒಂದೇ ಕಾಲಘಟ್ಟದ ಹಾಗೂ ಕನ್ನಡದ ಬರಹಗಾರರಾಗಿದ್ದು ತಮ್ಮ ಪ್ರಾದೇಶಿಕ ಸಮಸ್ಯೆಗಳನ್ನು ಹೇಗೆ ಭಿನ್ನವಾಗಿ ವಾಸ್ತವತಾವಾದದ ಹಿನ್ನೆಲೆಯಲ್ಲಿ ಕಾದಂಬರಿಗಳನ್ನು ರಚಿಸಿ ಪಾತ್ರ, ಕಥಾ ರಚನೆ, ಘಟನೆಗಳ ಮೂಲಕ ತಿಳಿಸಿರುವರು ಎಂಬುದನ್ನು ತಿಳಿಯಲಾಗುತ್ತದೆ. ಇನ್ನೂ ರಷ್ಯನ್ ಬರಹಗಾರರಾದ ಟಾಲ್‌ಸ್ಟಾಯ್ ಮತ್ತು ನಿಕೊಲಾಯ್ ಗೊಗೋಲ್‌ರವರು ರಷ್ಯನ್ ಸಮಾಜದಲ್ಲಿದ್ದಂತಹ ನಿರಂಕುಶ ಪ್ರಭುತ್ವ, ಜಮೀನ್ದಾರಿ ಪದ್ಧತಿ, ವರ್ಗಸಂಘರ್ಷ, ಅಧಿಕಾರಶಾಹಿತ್ವ, ಆಧುನಿಕತೆಯ ವಿಚಾರಗಳನ್ನು ವ್ಯಕ್ತಪಡಿಸಿದ ರೀತಿಯನ್ನು ಗುರುತಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಹಾಗೂ ರಷ್ಯನ್ ಸಾಹಿತ್ಯದಲ್ಲಿ ನಿಸರ್ಗ ಮತ್ತು ಮನುಷ್ಯ ಸಂಬಂಧಗಳ ಸ್ವರೂಪವನ್ನು ಚಿತ್ರಿಸಿರುವ ಆಯಾಮಗಳನ್ನು ತಿಳಿಯಲಾಗಿದೆ.

**ಪರಾಮರ್ಶನ ಗ್ರಂಥಗಳು**


1. ಕಾನೂರು ಹೆಗ್ಗಡತಿ: ಕುವೆಂಪು, 13ನೇ ಮುದ್ರಣ, ಉದಯರವಿ ಪ್ರಕಾಶನ ಮೈಸೂರು.
2. ಬೆಟ್ಟದ ಜೀವ: ಡಾ.ಕೆ.ಶಿವರಾಮ ಕಾರಂತ, ಮರು ಮುದ್ರಣ 2010, ಸಪ್ನ ಬುಕ್ ಹೌಸ್ ಬೆಂಗಳೂರು.
3. ಕಾರಂತ ಕೃತಿ ಕಡಲು: ಸಂ:ಜಿ.ಎಸ್.ಭಟ್ಟ, 1ನೇ ಮುದ್ರಣ 2018, ತನು ಮನು ಪ್ರಕಾಶನ ಮೈಸೂರು.
4. ವಾಸ್ತವತಾವಾದ: ಟಿ.ಪಿ.ಅಶೋಕ, 2ನೇ ಮುದ್ರಣ 1999, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
5. ಅನ್ನಾಕರೇನಿನ: ಅನು:ದೇ.ಜವರೇಗೌಡ, 2ನೇ ಮುದ್ರಣ 2006, ಸಿ.ವಿ.ಜಿ ಪಬ್ಲಿಕೇಷನ್ಸ್ ಬೆಂಗಳೂರು.
6. ಎರಡು ರಷ್ಯನ್ ನೀಳ್ಗತೆಗಳು (ಟಾಲ್‌ಸ್ಟಾಯ್, ನಿಕೋಲಾಯ್ ಗೊಗೋಲ್): ಟಿ.ಪಿ.ಅಶೋಕ, 1ನೇ ಮುದ್ರಣ 1999, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ.
7. ರಷ್ಯನ್ ಸಾಹಿತ್ಯ ಪರಿಚಯ: ತಿ.ತಾ.ಶರ್ಮ, 1ನೇ ಮುದ್ರಣ 1978, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
8. ಆಧುನಿಕ ಯೂರೋಪಿನ ಚರಿತ್ರೆ: ಡಾ.ಎಸ್.ಎನ್.ಶಿವರುದ್ರಪ್ಪಸ್ವಾಮಿ, 5ನೇ ಮುದ್ರಣ 2013, ಪೌರಸ್ತ್ಯ ಪ್ರಕಾಶನ ಮೈಸೂರು.
9. ಕಮ್ಯೂನಿಸಂ: ಸಂ:ಡಾ.ಕೆ.ವಿ.ಪುಟ್ಟಪ್ಪ, 1ನೇ ಮುದ್ರಣ 1957, ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.